**ದಿನಾಂಕಃ 11-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎಮ್ ಸಿ ವಕೀಲರಿಂದಃ</u>**

ನನ್ನ ತಂದೆ ದೇವಪ್ಪನಿಗೆ ಪ್ರತಿವಾದಿ ನಂ. 1 ಮತ್ತು 3 ಇಬ್ಬರು ಹೆಂಡತಿಯರು ಎಂದರೆ ಸರಿ. ಅವರು ಕಲಕೇರಿ ಗ್ರಾಮದಲ್ಲಿ ಬೇರೆ ಬೇರೆ ಮನೆ ಮಾಡಿಕೊಂಡು ಇದ್ದಾರೆ ಎಂದರೆ ಸರಿ. ದೇವಪ್ಪ ವ್ಯವಸಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ಕೂಲಿ ಮಾಡುತ್ತಿದ್ದ .

2. ಈ ದಾವಾ ಜಮೀನು ಸರ್ವೇ ನಂ. 60 ಕ್ಷೇತ್ರ 19 ಎಕರೆ 14 ಗುಂಟೆ ಪೈಕಿ 2 ಎಕರೆ 34 ಗುಂಟೆ ಹೊರತುಪಡಿಸಿ ಎಲ್ಲಿಯೂ ಸಹ ನಮ್ಮ ತಂದೆ ತಾಯಿ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ. ನನ್ನ ತಂದೆ ತಮ್ಮ ಜೀವಿತ ಅವಧಿಯಲ್ಲಿ ಒಂದು ಟ್ರಾಕ್ಟರ್ ಖರೀದಿಸಿದ್ದರು ಎಂದರೆ ಸರಿ. ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದರೆ ಸರಿ. ಸಾಲ ಕಟ್ಟದೇ ಇದುದ್ದಕ್ಕೆ ಆ ಬ್ಯಾಂಕಿನವರು 2012 ರಲ್ಲಿ ಟ್ರಾಕ್ಟರ್ ಜಪ್ತಿಗೆ ಬಂದಿದ್ದರು ಎಂದರೆ ಸರಿಯಲ್ಲ, ಆದರೆ ಒಟ್ಟಿಗೆ ಬಂದಿದ್ದರು. ಆಗ ನಮ್ಮ ಮನೆತನಕ್ಕೆ ಹಣಕಾಸಿನ ಅವಶ್ಯಕತೆ ಬಹಳ ಇತ್ತು ಎಂದರೆ ಸರಿ. ದಾವಾ ಜಮೀನು ಮಾರಿ ಆ ಟ್ರಾಕ್ಟರ್ ಸಾಲ ಕಟ್ಟಿದ್ದೇವೆ. ಸದರಿ ಸಾಲ 2012 ಕಟ್ಟಿದ್ದೇವೆ ಎನ್ನುವುದು ನೆನಪಿಲ್ಲ.

3. ನನ್ನ ಮದುವೆಯಾಗಿ 13 ವರ್ಷ ಆಯಿತು. 2011 ರಲ್ಲಿ ಮದುವೆಯಾಯಿತು ಎಂದರೆ ಸರಿ. ಪ್ರತಿವಾದಿ ನಂ. 2, 5, 6 ನಮ್ಮ ಮದುವೆಯನ್ನು ನಮ್ಮ ತಂದೆ ಮಾಡಿದರು ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿದ್ದರಿಂದ ನಾವೇ ಮಾಡಿಕೊಂಡೆವು ಎನ್ನುತ್ತಾರೆ. ನಾನು ಕೂಲಿ ಕೆಲಸ ಮಡುತ್ತಾನೆ. ಉಳಿದವರು ಎಲ್ಲಾ ಕೂಲಿ ಕೆಲಸ ಮಾಡುತ್ತಾರೆ.

4. ಪ್ರತಿವಾದಿ ನಂ. 1 ಶಿವಮ್ಮಳ ಮಕ್ಕಳಾದ 1) ಮಂಜುನಾಥ, ಈ ಪ್ರಕರಣದಲ್ಲಿ ಪಕ್ಷಗಾರರು ಇಲ್ಲದೇ ಇರುವ 2) ನೀಲಕಂಠಪ್ಪ 3) ಗಂಗಮ್ಮ ಕೂಡಿ ಕಲಿಕೇರಿಯ ನಮ್ಮ ತಂದೆ ಒಂದು ಸ್ವಂತ ಮನೆಯಲ್ಲಿರುತ್ತಿದ್ದಾರೆ. ಪ್ರತಿವಾದಿ ನಂ. 3 ಹಳ್ಳಮ್ಮ ನಮ್ಮ ತಾಯಿ ಅವರೊಂದಿಗೆ ನಾನು(ಗಣೇಶ), ಲಕ್ಷ್ಮೀಕಾಂತ, ಈ ಪ್ರಕರಣದ ಪಕ್ಷಗಾರಳು ಇಲ್ಲದೇ ಇರುವ ನಮ್ಮ ತಂಗಿ ಭಾರತಿ, ಕೂಡಿ ಇನ್ನೊಂದು ಮನೆಯಲ್ಲಿ ಕಲಿಕೇರಿಯಲ್ಲಿ ಇರುತ್ತೇವೆ, ನನ್ನ ತಂದೆ ದೇವಪ್ಪ ಕಿನ್ನಾಳ ಇವರು ಶಿವಮ್ಮ ಮತ್ತು

ಹಳ್ಳಮ್ಮ ಇರುವ 2 ಮನೆಗಳಲ್ಲಿ ಇರುತ್ತಿದ್ದರು. 2 ಮನೆಗಳ ಅಂತರ ಸುಮಾರು 100 ಮೀಟರ್ ಅಂತರ ಇರುತ್ತದೆ.

5. ನನ್ನ ತಂದೆ ಮರಣ ಹೊಂದುವರೆಗೆ 2 ಮನೆಗಳ ಹಿರಿಯತನವನ್ನು ನಮ್ಮ ತಂದೆ ನೋಡಿಕೊಳ್ಳುತಿದ್ದ, ಆತನ ನಂತರ ನಮ್ಮ ಮನೆತನವನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ಶಿವಮ್ಮನ ಮನೆತನದ ಅವರ ಹಿರಿಯ ಮಗ ಮಂಜುನಾಥ ನೊಡಿಕೊಳ್ಳುತ್ತಿದ್ದಾನೆ. ನನ್ನ ತಂದೆ ಶಾಲೆ ಕಲಿತಿದ್ದ ಆದರೆ ಅದು ಎಷ್ಟು ಅಂತಾ ಗೊತ್ತಿಲ್ಲ.

6. ನಿಪಿ 1 ಖರೀದಿ ಕರಾರು ಪತ್ರದ ಮೇಲೆ ಇರುವ ಪೊಟೋ ನನ್ನ ತಂದೆಯದು ಇರುತ್ತದೆ, ಸಹಿ ನಮ್ಮ ತಂದೆಯದ್ದು ಎಂದರೆ ಇರಬಹುದು, ನನ್ನ ತಂದೆ ಇಂಗ್ಲಿಷ್ ನಲ್ಲಿ ಸಹಿ ಮಾಡುತ್ತಿದ್ದ ಎಂದರೆ ಸರಿ. ಆತ ಪಿಯುಸಿಯವರೆಗ ಓದಿದ್ದ ಎನ್ನುವುದು ಗೊತ್ತಿಲ್ಲ. ಓದು ಬರಹ ಬರುತ್ತಿತ್ತು ಎಂದರೆ ಸರಿ.

7 ವಾದಿಗೆ ಖರೀದಿ ಕರಾರು ಪತ್ರ ಆದ ವಿಷಯ ನಮಗೆ ಈ ಕೇಸಿನಲ್ಲಿ ನೊಟಿಸ ಬಂದಾಗ ಗೊತ್ತಾಯಿತು. ಶಿವಪ್ಪ ಚರಾರಿಗೆ ಮಾರಾಟ ಮಾಡುವಾಗ ಮಾರುವ ವಿಷಯ ಗೊತ್ತಾಯಿತು. ಈ ಕೇಸು ಹಾಕಿರುವ ನಾಗಪ್ಪ 2012 ರಲ್ಲಿ ನಮ್ಮ ಮನೆಗೆ ಬಂದು ಹೋಗಿದ್ದ ಎಂದರೆ ಸರಿಯಲ್ಲ. ನನ್ನ ತಂದೆ ದೇವಪ್ಪ ಏನೆಲ್ಲಾ ವ್ಯವಹಾರ ಮಾಡುತ್ತಿದ್ದ ಎನ್ನುವ ವಿಷಯ ನನಗೆ ಗೊತ್ತಿರಲಿಲ್ಲ. ಆತ ಮನೆತನದ ಯಾವುದೇ ವಿಷಯ ತಾನೇ ನೋಡಿಕೊಳ್ಳುತಿದ್ದ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

8. 2016 ರಲ್ಲಿ ಸರ್ವೇ ನಂ. 60 ಒಟ್ಟು 19 ಎಕರೆ 14 ಗುಂಟೆ ಜಮೀನು ಒಟ್ಟಿಗೆ ಇತ್ತು ಎಂದರೆ ಸರಿ. 11-ಇ ನಕ್ಷೆ ಯಾವ ವರ್ಷದಲ್ಲಿ ಮಾಡಿಸಿದೆವು ಅಂತಾ ಗೊತ್ತಿಲ್ಲ. ನಾನು 11-ಇ ನಕ್ಷೆ ಮಾಡಿಸಿಲ್ಲ ನಮ್ಮ ತಂದೆ ಮಾಡಿಸಿದ್ದಾನೆ. ಪ್ರತಿವಾದಿ ನಂ. 7 ಶಿವಪ್ಪ ಚರಾರಿ ಇವರಿಗೆ ನನ್ನ ತಂದೆ ಆಸ್ತಿ ಮಾರಾಟ ಮಾಡಿದ ವಿಷಯ ಗೊತ್ತಿದೆ. ಅವರಿಗೆ ಮಾರಾಟ ಮಾಡುವ ಸಮಯ 11-ಇ ನಕ್ಷೆ ತಯಾರಿಸಲಾಗಿತ್ತು ಎಂದರೆ ಸರಿ.

9. ನನ್ನ ತಂದೆ ಒಳ್ಳೆಯವನಾಗಿದ್ದ ಎಂದರೆ ಸರಿ, ಆದರೆ ಕುಡಿಯುತ್ತಿದ್ದ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಜೂಜುಕೋರನಾಗಿದ್ದ ಮತ್ತು ಸೂಳೆಯರನ್ನು ಮಾಡುತ್ತಿದ್ದ ಅಂತಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೇನೆ.

10. ನನ್ನ ತಂದೆ 2012 ರಲ್ಲಿ ವಾದಿ ನಾಗಪ್ಪನಿಗೆ ದಾವಾ ಜಮೀನು ಕ್ಷೇತ್ರ 2 ಎಕರೆ 34 ಗುಂಟೆ ಸಂಬಂದದಲ್ಲಿ ತನ್ನ ಮನೆತನದ ಅಡಚಣೆಗಾಗಿ 6 ಲಕ್ಷ ರೂಪಾಯಿಗೆ ಮಾರಾಟ ಮಾಡಲು ಒಪ್ಪಿ ನಗದಾಗಿ 5,10,000/- ರೂಪಾಯಿ ಮುಂಗಡವಾಗಿ ಪಡೆದಿದ್ದ ಎಂದರೆ ಸರಿಯಲ್ಲ, ನನ್ನ ತಂದೆಯ ಮರಣದ ನಂತರ ಇನ್ನೂಳಿದ 90 ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಶುದ್ದ ಕ್ರಯ ಪತ್ರ ಬರೆದುಕೊಡಿ ಎಂದು ನಾಗಪ್ಪ ಸಾಕ್ಷಿದಾರರಾದ ಶಿವಕುಮಾರ ಮತ್ತು ಮಂಜುನಾಥನನ್ನು ಕರೆದುಕೊಂಡು ಬಂದು ವಿನಂತಿಸಿಕೊಂಡ ಎನ್ನುವುದು ಸರಿಯಲ್ಲ,

11. ಶಿವಕುಮಾರ ಮತ್ತು ಮಂಜುನಾಥ ಸಹ ಕರಾರು ಪತ್ರದ ಪ್ರಕಾರ ಶುದ್ದ ಕ್ರಯ ಪತ್ರ ಬರೆದುಕೊಡಿ ಅಂತಾ ನಮ್ಮ ತಾಯಿಗೆ ಮತ್ತು ನಮಗೂ ಕೇಳಿದರೂ ಎಂದರೆ ಸರಿಯಲ್ಲ. ನಾನು ಅವರಿಗೆ ನೋಡಿಲ್ಲ. ನನ್ನ ತಂದೆಯವರು ಇಂದಿಲ್ಲ ನಾಳೆ ಖರೀದಿ ಪತ್ರ ಬರೆದುಕೊಡುತ್ತಾರೆ ಎಂಬ ವಿಶ್ವಾಸದಿಂದ ಅವರ ಮಾತು ನಂಬಿ ವಾದಿ ನಾಗಪ್ಪ ಕಾಯುತ್ತಾ ಬಂದ ಎನ್ನುವುದು ಸರಿಯಲ್ಲ. ನಾವು ಪ್ರತಿವಾದಿ ನಂ. 7 ಶಿವಪ್ಪ ಚರಾರಿಯವರಿಗೆ ಮಾರಿದ್ದೇವೆ ಎಂದರೆ ಸರಿ. ಸದರಿ ವಿಷಯ ನಂತರ ಗೊತ್ತಾಗಿ ವಾದಿ ಈ ದಾವೆ ಮಾಡಿದ ಎಂದರೆ ಸರಿ.

12. 11-ಇ ನಕ್ಷೆ ತಯಾರಿಸಿದ ನಂತರ ಶುದ್ದ ಕ್ರಯ ಪತ್ರ ಬರೆದುಕೊಡುವುದಾಗಿ ನನ್ನ ತಂದೆ ವಾದಿಗೆ ಹೇಳುತ್ತಾ ಬಂದರು ಎನ್ನುವುದು ಗೊತ್ತಿಲ್ಲ. ನ್ನ ತಂದೆಯ ಮರಣದ ನಂತರ ನಾವು ಸಹ 11-ಇ ನಕ್ಷೆ ತಯಾರಿಸಿ ಖರೀದಿ ಪತ್ರ ಬರೆದುಕೊಡುವುದಾಗಿ ಹೇಳುತ್ತಾ ಬಂದೆವು ಎಂದರೆ ಸರಿಯಲ್ಲ.

13. ದಾವಾ ಜಮೀನು ಪೂರ್ವಕ್ಕೆಃ ನಿಂಗಪ್ಪ ಈಳಗೇರ ಜಮೀನು ಎಂದರೆ ಸರಿ.
ಪಶ್ಚಿಮಕ್ಕೆ ಃ ವಂಸತಗೌಡ ಇವರ ಜಮೀನು ಎಂದರೆ ಸರಿ
ಉತ್ತರಕ್ಕೆ ಃ ಭರಮಪ್ಪ ಹಿರೇಮನಿಯವರ ಜಮೀನು ಎಂದರೆ ಸರಿ.
ದಕ್ಷಿಣಕ್ಕೆ ಃ ಇನ್ನೂಳಿದ ನಮ್ಮ ಜಮೀನು ಎಂದರೆ ಸರಿ.

14. ಸರ್ವೇ ನಂ. 12/2 ಕ್ಷೇತ್ರ 4 ಎಕರೆ 29 ಗುಂಟೆ, ಪ್ರತಿವಾದಿ ನಂ. 1, 2, 3, 5 ಮತ್ತು 6 ರವರ ಹೆಸರಿನಲ್ಲಿದೆ ಎಂದರೆ ಸರಿ. ಈಗಲೂ ಸಹ ಈ ಜಮೀನು ನಮ್ಮ ಹೆಸರಿನಲ್ಲಿರುತ್ತದೆ. ಖರೀದಿ ವಚನ ಪತ್ರ ನಾಗಪ್ಪನಿಗೆ ಬರೆದುಕೊಟ್ಟ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ, ಸರ್ವೇ ನಂ. 12/2 ಕ್ಷೇತ್ರ 4 ಎಕರೆ 29 ಗುಂಟೆ ಜಮೀನು ಮಾರಾಟ ಮಾಡಿಲ್ಲ ಎಂದರೆ ಸರಿ, ಆದರೂ ಸಹ ವಾದಿಗೆ ಹಾನಿ ಮಾಡಲು ಆತನ ಹೆಸರಿಗೆ ನನ್ನ ತಂದೆ ಬರೆದುಕೊಟ್ಟ ಕರಾರು ಪತ್ರದಲ್ಲಿ ಕಾಣಿಸಿದ ಈ ದಾವಾ ಜಮೀನು ಸರ್ವೇ ನಂ. 60 ಕ್ಷೇತ್ರ 2 ಎಕರೆ 34 ಗುಂಟೆ ಪ್ರತಿವಾದಿ ನಂ. 7 ಇವರಿಗೆ ಮಾರಾಟ ಮಾಡಿದೆ ಎಂದರೆ ಸರಿಯಲ್ಲ. ಆದರೆ ನಮ್ಮ ಮನೆತನದ ಅಡಚಣೆಗಾಗಿ ಮಾರಿದ್ದೇವೆ.

15. ದಿಃ- 22-02-2010 ರಂದು ನನ್ನ ತಂದೆ ನಾಗಪ್ಪನಿಗೆ ಕರಾರು ಪತ್ರ ಮಾಡಿ ಕೊಟ್ಟ ವಿಷಯ ಈ ನೊಟಿಸ ಬಂದ ನಂತರ ಗೊತ್ತಾಯಿತು. ವಾದಿ ನಾಗಪ್ಪನಿಗೆ ದಿಃ- 22-02-2010 ರಂದು ನನ್ನ ತಂದೆ ಬರೆದುಕೊಟ್ಟಿದ್ದ ವಚನ ಪತ್ರದ ಪ್ರತಿಯನ್ನು ಈಗ 1 ತಿಂಗಳ ಹಿಂದೆ ತೆಗೆಯಿಸಿ ತಂದು ಹಾಜರುಪಡಿಸಿದ್ದೇನೆ. ಈ ವಿಷಯ ಸಹ ಈ ಪ್ರಕರಣದ ನೊಟಿಸ ಬಂದ ನಂತರ ಗೊತ್ತಾಯಿತು. ಸದರಿ ಖರೀದಿ ವಚನ ಪತ್ರ ವ್ಯವಹಾರ ನನಗೆ ಮಾಹಿತಿ ಇಲ್ಲ. ಆ ಸದರಿ ಕರಾರು ಪತ್ರದ ಕುರಿತು ಉಳಿದ ಪ್ರತಿವಾದಿ ನಂ. 1 ರಿಂದ 4 ಮತ್ತು 6 ಇವರಿಗೂ ಸಹ ಗೊತ್ತಿಲ್ಲ.

16. ನಮ್ಮ ಮನೆತನದ ಮೇಲ್ಕಂಡ 2 ಜನ ಸಾಕ್ಷಿದಾರರ ಸಮಕ್ಷಮ ಈ ಖರೀದಿ ಕರಾರು ಮಾತುಕತೆ ನಮ್ಮ ಮನೆಯಲ್ಲಿ ಆಗಿತ್ತು ಎಂದರೆ ಸರಿಯಲ್ಲ, ನಾನು ಸಹ ಸದರಿ ಕರಾರು ಪತ್ರ ಬರೆಯುವ ಕಾಲಕ್ಕೆ ಉಪನೊಂದಣಿ ಅಧಿಕಾರಿ ಕಚೇರಿಗೆ ಬಂದಿದ್ದ ಎಂದರೆ ಸರಿಯಲ್ಲ, 2012 ರಲ್ಲಿ ಆತ ಆರೋಗ್ಯವಾಗಿದ್ದ, ಆದರೆ ದಮ್ಮು ಕೆಮ್ಮು ಹೆಚ್ಚಾಗಿತ್ತು.

17 . ಈಗ ನನ್ನ ವಯಸ್ಸು ಸುಮಾರು 42. 2012 ರಲ್ಲಿ ನಾನು ಉಡುಪಿಯಲ್ಲಿದ್ದೆ ಎಂದರೆ ಸರಿ. ಆಗ ನಮ್ಮ ಮನೆತದಲ್ಲಿ ಏನೆಲ್ಲಾ ವ್ಯವಹಾರ ಆಗುತ್ತಿತ್ತು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಆದರೆ ಒಂದು ಬಾರಿ ಕರಾರು ಪತ್ರ ಮಾಡಿಕೊಂಡ ವಿಷಯ ಹೇಳಿದ್ದ, ಅದನ್ನು ಕ್ಯಾನ್ಸಲ್ ಮಾಡಿಸಿಕೊಳ್ಳಬೇಕು ಅಂತಾ ಸಹ ಹೇಳಿದ್ದ. ನನ್ನ ತಂದೆ ಚಿಕಿತ್ಸಾ ದಾಖಲಾತಿಗಳಲ್ಲಿ ಎಲ್ಲಿಯೂ ಕೂಡ ಆತ intraction ಅಂತಾ ಕಾಣಿಸಿಲ್ಲ. ಆತನಿಗೆ ಚಿಕಿತ್ಸಾ ಕೊಡಿಸಿದ ಕುರಿತು ದಾಖಲೆ ಹಾಜರುಪಡಿಸಿಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**